ಅರಸುರವರು, ಹಿಂದುಳಿದ ಜನಾಂಗಕ್ಕೆ ಮೀಸಲಾತಿಯನ್ನು ಮಾಡಿರತಕ್ಕದ್ದು ಒಂದೇ ಪ್ರಶ್ನೆ ಅಲ್ಲ, ಅವರು ಇಡೀ ಜನಾಂಗಕ್ಕೆ ಆತ್ಮ ಗೌರವ ಮತ್ತು ಆತ್ಮ ಸ್ಥೈರ್ಯವನ್ನು ತಂದು ಕೊಟ್ಟಿರತಕ್ಕಂಥಾದ್ದು. ಆ ಮೂಲಕವಾಗಿ ಕೂಡ ಇತಿಹಾಸದಲ್ಲಿ ಈಗಾಗಲೇ ದಾಖಲೆ ಆಗಿರತಕ್ಕಂಥಾದ್ದು. ಅದರ ಬಗ್ಗೆ ಉತ್ಪ್ರೇಕ್ಷೆಯ ಮಾತಿಲ್ಲ. ಸನ್ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಅವರು ಏನು ಹೇಳಿದರು ನಾವು ದಿವಂಗತ ದೇವರಾಜ ಅರಸುರವರ ಮೀಸಲಾತಿಯ ಕ್ರಮ ಮತ್ತು ಭೂ ಸುಧಾರಣೆಯ ಕಾಯಿದೆ ಕ್ರಮಕ್ಕೆ ಯಾರು ವಿರೋಧಿಸಿದವರು ಎನ್ನುವುದು ಮಾನ್ಯ ಪಟೇಲರಿಗೆ ಗೊತ್ತಿದೆ. ಅದರಿಂದ ಅವರ ಬಗ್ಗೆ ನಾನು ಹೆಚ್ಚು ಚರ್ಚೆಯನ್ನು ಮಾಡದೆ ಇದು ಬಹಳ ಮುಖ್ಯವಾಗಿರುವಂತಹ ಪ್ರಶ್ನೆ. ಮತ್ತು ಈಗಾಗಲೇ ಚುನಾವಣೆಗಳು ಆಗಿ ಹೋಗಿವೆ. ಚುನಾವಣೆಗಳಿಗೆ ಜನ ಒಪ್ಪಿದ್ದಾರೆ. ನಾವು ತಂದಿರತಕ್ಕಂತಹ ಸುಗ್ರೀವಾಜ್ಞೆಯನ್ನು ಒಪ್ಪಬೇಕೆಂಬ ಉದ್ದೇಶದಿಂದ ಈ ವಿಧೇಯಕವನ್ನು ತಂದಿದ್ದೇನೆ. ದಯವಿಟ್ಟು ಸದನ ಇದಕ್ಕೆ ಒಪ್ಪಿಗೆಯನ್ನು ಕೊಡಬೇಕೆಂದು ಹೇಳಿ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ : ಆಳುವ ಪಕ್ಷದವರು ಆತ್ಮ ಶೋಧನೆ ಮಾಡಿಕೊಂಡು ಮಾಡಬೇಕು.

ಶ್ರೀ ವೈ. ರಾಮಕೃಷ್ಣ : ಅಧ್ಯಕ್ಷರೆ, ಇದು ಆತ್ಮ ದ್ರೋಹದ ತಿದ್ದುಪಡಿ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ,

"1995ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 11 ರವರೆಗೆ

ಉಪ ಸಭಾಧ್ಯಕ್ಷರು : "ಖಂಡ 2 ರಿಂದ 11 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 11 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಉಪ ಸಭಾಧ್ಯಕ್ಷರು : ಪ್ರಸ್ತಾವ ಏನೆಂದರೆ ;

"ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕರ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆ ಖಂಡ, ಹೆಸರು ಮತ್ತು ಅವತರಣಿಕೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, 1995ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೆಕೆಂದು

ಲಿಪಿ ಸಚಿವಳ್ಳುರು . ಪ್ರಸ್ತುತ ಪಡಿಸಿದರು,

"1995ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಶೇಧ) (ತಿದ್ದುಪಡಿ) ವಿಧೇಯಕ 1995

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು) ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಶೇಧ) (ತಿದ್ದುಪಡಿ) ವಿಧೇಯಕ 1955ನ್ನು ಪರ್ಯಾಲೋಚಿಸಬೇಕೆಂದು ಪ್ರಾರ್ಥಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಸನ್ಮಾನ್ಯ ಉಪಾಧ್ಯಕ್ಷರೆ, ಈ ಪಕ್ಷಾಂತರ ನಿಯಮಾವಳಿಗಳ ವಿಧೇಯಕವನ್ನು ತರತಕ್ಕಂಥದ್ದರ ಉದ್ದೇಶ ಯಾರು ಚುನಾಯಿತರಾಗಿರುವಂತಹ ಸದಸ್ಯರು ಅವರು ಪದೇ ಪದೇ ಗೈರು ಹಾಜರಾಗುವುದು ಅಥವಾ ನಿರಂತರವಾಗಿ ಗೈರು ಹಾಜರಾಗುವುದು, ರಾಜಕೀಯ ಪಕ್ಷಗಳಿಂದ ಚುನಾಯಿತರಾದಂತಹವರು ಅವರು ಕೊಡುವಂತಹ ನಿರ್ದೇಶನಗಳಿಗೆ ಆರು ತಿಂಗಳು ಪರಮಾಧಿಕಾರದ ಒಳಗಾಗಿ ಪ್ರತ್ಯೇಕವಾಗತಕ್ಕಂಥದ್ದು, ಮತ್ತು ಅವರು ಕೊಡುವಂತಹ ನಿರ್ಣಯಗಳಿಗೆ ವಿರುದ್ಧವಾಗಿ ಮತ ಚಲಾಯಿಸತಕ್ಕಂಥದ್ದು, ಮತ್ತು ಈ ವಿಚಾರದಲ್ಲಿ ಅವರು ಪಕ್ಷವನ್ನು ವಿಭಜಿಸುವಂತಹ ಸಂದರ್ಭದಲ್ಲಿ ತಾತ್ವಿಕ ಸಿದ್ಧಾಂತಗಳ ಮೂಲಕವಾಗಬಹುದು ಅಥವಾ ಬೇರೆ ಅನ್ಯ ಕಾರಣಗಳಿಂದ ಆಗಬಹುದು ಅಂತಹ ಸಂದರ್ಭದಲ್ಲಿ ಯಾವುದು ಪಕ್ಷಾಂತರ ಆಗುತ್ತದೆ ಅನ್ನುವುದು ಹಿಂದೆ ಇದ್ದಂತಹ 10ನೆ ಶೆಡ್ಯೂಲ್ ನಲ್ಲಿ ನಾವೇನು ತಿದ್ದುಪಡಿಗಳನ್ನು ತಂದಿದ್ದೆವು. ಅದೇ ರೀತಿಯಾದ ಕೆಲವು ಬದಲಾವಣೆಗಳನ್ನು ಈ ವಿಧೇಯಕದಲ್ಲಿ ತಂದಿದ್ದೇವೆ. ಇದನ್ನು ಸದನ ಒಪ್ಪುವಂಥದ್ದು ಮತ್ತು ಯಾರ್ಯಾರು ಈ ರೀತಿಯಾಗಿ ಪಕ್ಷ ವಿರೋಧಿ ನಡವಳಿಕೆಗಳನ್ನು ಮಾಡಿಕೊಂಡಿದ್ದಾರೆ ಮತ್ತು ಅವರ ಪಕ್ಷ ಸದಸ್ಯತ್ವವನ್ನು ಅನರ್ಹತೆಗೊಳಿಸತಕ್ಕಂಥದ್ದರ ಬಗ್ಗೆ ನಿರ್ಣಯ ಕೈಗೊಳ್ಳುವ ಅಧಿಕಾರ, ಅಲ್ಲಿಯ ಮುಖ್ಯ ಕಾರ್ಯನಿರ್ವಾಹಕರು, ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ, ಮತ್ತು ಸರ್ಕಾರಕ್ಕೆ ಇರುತ್ತದೆ, ಎನ್ನುವ ವಿಧೇಯಕ ತಂದಿದ್ದೇವೆ. ಸದನ ದಯವಿಟ್ಟು ಇದಕ್ಕೆ ಒಪ್ಪಿಗೆಯನ್ನು ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ : ಅಧ್ಯಕ್ಷರೆ, ಈ ಒಂದು ಮಸೂದೆ ಆ ಪಕ್ಷದಿಂದ ಈ ಪಕ್ಷಕ್ಕೆ ಹೋಗಬಾರದು ಎಂದು ಹೇಳಿ 'ಆಂಟಿ ಡಿಫೆಕ್ಷನ್ ಬಿಲ್' ತಂದಿದ್ದಾರೆ, ಇದರಲ್ಲಿ ನಾಮಿನೇಟೆಡ್ ಮೆಂಬರ್ ಎಂದು ಹೇಳಿ ಸೇರಿಸುತ್ತಾರೋ ಏನೋ, ಮತ್ತೆ ಪಂಚಾಯತ್‌ಗೆ, ಜಿಲ್ಲಾ ಪರಿಷತ್ತಿಗೆ ಮತ್ತೆ ಏನಾದರೂ ನಾಮಿನೇಷನ್ ಮಾಡುವಂತಹ ಅವಕಾಶ ತಂದಿದ್ದಾರೋ ಎಂದು ನನಗೆ ಬಹಳ ಭಯ ಆಗುತ್ತಿದೆ ಅದರಿಂದ ಬಹುಶಃ ಈ ಪಕ್ಷದಿಂದ ಆ ಪಕ್ಷಕ್ಕೆ ಹೋಗಬಾರದು ಅನ್ನುವುದು ಒಂದು ಒಳ್ಳೆಯ ಅಭಿಪ್ರಾಯ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಮತ್ತೆ ಈ ನಾಮಿನೇಷನ್ ಮಾಡಿ ಬಿಡುತ್ತಾರೋ ಎಂದು ನನಗೆ ಭಯವಾಗುತ್ತಿದೆ.

'Member means a member of the zilla panchayath or a Mandal panchayath elected or nominated. ಎಂದು ಇದೆ. ಎಲ್ಲಾದರೂ ಒಂದೆರಡು ಅಥವಾ ಮೂರು